ಎನ್ನುವವರೂ ಇದ್ದಾರೆ. ನನಗೆ ಕುವೆಂಪು ಅವರ ಎರಡು ಕಾದಂಬರಿಗಳೂ ಇಷ್ಟ. ಅಲ್ಲಿನ ಚಿತ್ರಣದ ಶೈಲಿ ಈ ನನ್ನ ಕೃತಿಗಳಲ್ಲೂ ಮೂಡಿರಬಹುದು.

ಕಾರಂತರ 'ಒಟ್ಟು ನಿಲುವು' ನನ್ನ ಮೇಲೆ ಗಾಢ ಪ್ರಭಾವ ಬೀರಿದೆ. ದೇವರು, ಧರ್ಮ, ವ್ಯವಸ್ಥೆಯ ಅವ್ಯವಸ್ಥೆಗಳ ಬಗ್ಗೆ ಅವರ ನಿಲುವು ಮತ್ತು ಬೇರೆ ಬೇರೆ ಕ್ಷೇತ್ರಗಳಲ್ಲಿ ತೊಡಗಿಸಿಕೊಳ್ಳುವ ಅವರ ಹುಮ್ಮಸ್ಸನ್ನು ನಾನೂ ಒಪ್ಪುತ್ತೇನೆ. ನಾನು ನನ್ನ ಕಾದಂಬರಿಗಳನ್ನು ಕಲ್ಪನೆಯ ಸೌಧದಲ್ಲಿ ರಚಿಸುವುದಿಲ್ಲ. ಪ್ರತಿಯೊಂದು ಕಾದಂಬರಿಯ ಹಿಂದೆಯೂ ನಾನು ನೋಡಿದ, ಕೇಳಿದ ಮತ್ತು ಅನುಭವಿಸಿದ ಗಟ್ಟಿಯಾದ ಅನುಭವ ಇದೆ. 'ಕಥೆ' ಎಷ್ಟು ಮುಖ್ಯವೋ ಕಥೆ ಹೇಳುವುದೂ ಅಷ್ಟೇ ಮುಖ್ಯ ಎಂದು ನನ್ನ ನಂಬಿಕೆ.

**◆ ನಿಮ್ಮ ಕಾವ್ಯದಲ್ಲಿ ದೇವರ ಪ್ರಸ್ತಾಪ ಹಲವು ವಿಧವಾದ ರೂಪಕಗಳಲ್ಲಿ ಮತ್ತೆ ಮತ್ತೆ ಬರುವುದನ್ನು ನಾವು ಕಾಣುತ್ತೇವೆ. 'ಇದ್ದೂ ಇಲ್ಲದ್ದು' ಕಾದಂಬರಿಯಲ್ಲಾದರೆ ಕೊನೆಯಲ್ಲಿ ರಮಾನಂದ ದೇವರಮನೆ ದೇವರಿಗೆ ಎಳ್ಳು ನೀರು ಬಿಡುತ್ತಾನೆ. ನಿಮ್ಮ ಪಾತ್ರಗಳೇ ಒಂದೆಡೆ ಆರಾಧಿಸಿದರೆ, ಮತ್ತೊಂದೆಡೆ ವಿಸರ್ಜಿಸುತ್ತವೆ. ನಿಮ್ಮ ಕಲ್ಪನೆಯ ದೇವರ ಸ್ವರೂಪವಾದರೂ ಏನು?**

ದೇವರು ಎನ್ನುವುದು ನನಗೆ ಯಾವತ್ತೂ ಕುತೂಹಲ ಮತ್ತು ಪ್ರಶ್ನೆ. ಇದ್ದಾನೆಯೇ ಎಂದರೆ ರುಜುವಾತುಪಡಿಸಲು ನನಗೆ ಸಾಧ್ಯವಿಲ್ಲ. 'ಇಲ್ಲ' ಎನ್ನುವುದಾದರೆ ಪೂರ್ತಿ ನಿರಾಕರಿಸಲು ನನ್ನ ಹಿಂದೆ ಇರುವ ಪರಂಪರೆ ನನಗೆ ಅನುಮತಿ ಕೊಡುವುದಿಲ್ಲ.

ನಾನು ದೇವರನ್ನು ಪ್ರಕೃತಿಯಲ್ಲಿ ಮತ್ತು ನಾವು ಮಾಡುವ ಕೆಲಸಗಳಲ್ಲಿ ಕಾಣುತ್ತೇನೆ. ದೇವರನ್ನು ನಂಬುವುದರಿಂದ ಲಾಭ ಆಗುತ್ತದೆ ಎನ್ನುವುದು 'ದೇವರಷ್ಟೇ' ಒಂದು 'ನಂಬಿಕೆ'! ನಂಬದಿದ್ದರೆ ಅವನ ಕೋಪಕ್ಕೆ ತುತ್ತಾಗುತ್ತೇವೆ ಎನ್ನುವುದೂ ಸತ್ಯ ಅಲ್ಲ. ನಾವು ಸೃಷ್ಟಿಸಿದ ದೇವರು, 'ದೇವರೇ ಆಗಿರುವುದಾದರೆ' ಅವನಿಗೆ ಧೂಪ, ದೀಪ, ನೈವೇದ್ಯ ಬೇಡ ಎನ್ನಬೇಕಿತ್ತು. ಆತ ಹೊಗಳಿಕೆಗೆ ಹಿಗ್ಗಲಾರ, ತೆಗಳಿಕೆಗೆ ಕುಗ್ಗಲಾರ ಎನ್ನುವುದು ನನ್ನ ನಂಬಿಕೆ. 'ದೇವರ ಭಯವೇ ಜ್ಞಾನದ ಮೂಲ' ಎನ್ನುವುದರ ಹಿಂದೆ ಇರುವ 'ಜ್ಞಾನ' ಅಂದರೆ ಏನು ಎಂದು ನನಗೆ ಗೊತ್ತಿಲ್ಲ!

ದೇವರನ್ನು ಆರಾಧಿಸುವವರ ಬಗ್ಗೆ ನನಗೆ ಅಪಾರ ಗೌರವ ಇದೆ. ಡಿ.ವಿ.ಜಿ, ಮಾಸ್ತಿ, ಬೇಂದ್ರೆ, ಪು.ತಿ.ನ. ಮೊದಲಾದವರು ದೇವರನ್ನು ಅಪಾರವಾಗಿ ನಂಬಿದವರು. ಕಾರಂತರು, ಎ.ಎನ್. ಮೂರ್ತಿರಾಯರು ದೇವರ ಬಗ್ಗೆ ನಿರ್ಲಿಪ್ತರಾಗಿದ್ದವರು. ಕುವೆಂಪು ಅವರಲ್ಲಿ ದೇವರ ಬಗ್ಗೆ ದ್ವಂದ್ವವು ಇದ್ದ ಹಾಗೆ ಅವರ 'ನೆನಪಿನ ದೋಣಿ'ಯಲ್ಲಿ ನನಗೆ ಕಾಣುತ್ತದೆ.

ನನ್ನ ಮನೆಮಂದಿ ಪೂರ್ತಿ ದೇವರನ್ನು ನಂಬುವವರು. ಅವರ ಯಾವುದೇ ಆಚರಣೆಗಳಿಗೆ ನನ್ನ ವಿರೋಧ ಇಲ್ಲ. ಬೆಂಬಲ ಇದೆ. ನಾನೂ ಅದರಲ್ಲಿ ಪಾಲ್ಗೊಳ್ಳುತ್ತೇನೆ. ಆದರೆ, ಅವರಲ್ಲಿರುವ ಶ್ರದ್ಧೆ ಭಕ್ತಿಗಳು ನನ್ನಲ್ಲಿ ಯಾಕೋ ಮೂಡುವುದಿಲ್ಲ. ಇದು ನನ್ನ 'ಮಿತಿ' ಇರಬಹುದು ಅಥವಾ ಮಿತಿಯನ್ನು 'ಮೀರಿದ ಸ್ಥಿತಿ'ಯೂ ಇರಬಹುದು!

**◆ ಕೊನೆಯದಾಗಿ, ನಿಮ್ಮ ಸಾಹಿತ್ಯ ಮತ್ತು ಸಂಘಟನೆ ಬಗ್ಗೆ ನಿಮ್ಮ ಕುಟುಂಬದ ಪ್ರತಿಕ್ರಿಯೆ ಅಥವಾ ಪ್ರೋತ್ಸಾಹದ ಬಗ್ಗೆ ಹೇಳ್ತೀರಾ ಸರ್?**

ನನ್ನ ಹೆಂಡತಿ, ಮಕ್ಕಳು ಹಾಗೂ ಬಂಧುಗಳು ಕೂಡಾ ನನ್ನಷ್ಟೇ ಗೌರವ ಮತ್ತು ಪ್ರೀತಿಯನ್ನು ಈ ಎರಡರ ಬಗೆಗೂ ಇಟ್ಟುಕೊಂಡಿದ್ದಾರೆ. ನನ್ನ ನಿಲುವನ್ನು ಅವರು ಪ್ರಶ್ನಿಸುವುದಿಲ್ಲ. ನನ್ನ ಹೆಂಡತಿ ಪ್ರೇಮಲತಾಳ ಪಾತ್ರವಂತೂ ಅಮೋಘ. ಅವಳು ನನ್ನ ಎಲ್ಲಾ ಕೃತಿಗಳ ಮೊದಲ ಓದುಗಳಾಗಿದ್ದಾಳೆ.

ಮೊದಲ ಮಗ ನಿರಂಜನನ ಕುಟುಂಬ ನಮ್ಮೊಂದಿಗೇ ಕಾಂತಾವರದಲ್ಲಿ ವಾಸವಿದ್ದು ಕನ್ನಡ ಸಂಘದ ಚಟುವಟಿಕೆಗಳಲ್ಲಿ ನಮ್ಮಷ್ಟೇ ಉತ್ಸಾಹದಿಂದ ಪಾಲ್ಗೊಳ್ಳುವುದು ನನಗೆ ಸಂತೋಷ ನೀಡಿದೆ. ನನ್ನ ಎರಡನೇ ಮಗ ಸುದರ್ಶನನ ಚೊಚ್ಚಲ ಕಾದಂಬರಿ 'ವೈರಸ್' ಅನ್ನು 'ಸುಧಾ' ಧಾರಾವಾಹಿಯಾಗಿ ಪ್ರಕಟಿಸಿದೆ. ಮೂರನೇ ಮಗನ ಹೆಂಡತಿ ಡಾ. ಪ್ರಜ್ಞಾ ನನ್ನ ಕವಿತೆಗಳನ್ನು ಹಿಂದಿಗೆ ಅನುವಾದಿಸಿದ್ದಾಳೆ. ಇದಕ್ಕಿಂತ ಬೇರೆ ಏನು ಬೇಕು ಸಂಸಾರದಲ್ಲಿ?

●